ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

**ವಿಷಯ:** ಖಾಸಗಿ ಅನುದಾನಿತ ಪದವಿ/ ಶಿಕ್ಷಣ/ ಕಾನೂನು ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ಬೋಧಕರು/ ಗ್ರಂಥಪಾಲಕರಿಗೆ CAS ಸ್ಥಾನೀಕರಣದಡಿಯಲ್ಲಿ 2018ರ ಯು.ಜಿ.ಸಿ ನಿಯಮಗಳನ್ವಯ ಶೈಕ್ಷಣಿಕ ಹಂತ 14ರಲ್ಲಿ ಪದೋನ್ನತಿ ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:**
1. ಯು.ಜಿ.ಸಿ. ನಿಯಮಗಳ ಆದೇಶ ಸಂಖ್ಯೆ:ಎಫ್1-2/2017 (ಇಸಿ/ಪಿಎಸ್), ದಿ:18.07.2018.
2. ಸರ್ಕಾರಿ ಆದೇಶ ಸಂಖ್ಯೆ: ಇಡಿ 483 ಯುಎನ್ಇ 2017, ದಿ:16.03.2019 ಹಾಗೂ ಸರ್ಕಾರದಿಂದ ಕಾಲ ಕಾಲಕ್ಕೆ ಹೊರಡಿಸಲಾದ ಆದೇಶ ಮತ್ತು ಮಾರ್ಗಸೂಚಿಗಳು.
3. ಸರ್ಕಾರಿ ಆದೇಶ ಸಂಖ್ಯೆ: ಇಡಿ 123 ಡಿಸಿಇ 2020, ದಿ:02.03.2021.
4. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/177/ಎಜಿಪಿ/2018-19/ ಬಸ್ಥಾವಿ, ದಿನಾಂಕ:23.02.2022.
5. ಸರ್ಕಾರದ ಪತ್ರ ಸಂಖ್ಯೆ: ಇಡಿ 147 ಡಿಸಿಇ 2022 (ಇ), ದಿನಾಂಕ:03.11.2022.
6. ಸರ್ಕಾರದ ಆದೇಶ ಸಂಖ್ಯೆ:ಇಡಿ 147 ಡಿಸಿಇ 2022 (ಇ) ದಿನಾಂಕ:08.12.2023.
7. ಕೇಂದ್ರ ಕಛೇರಿಯಲ್ಲಿ ದಿನಾಂಕ:06.11.2023 ರಿಂದ 06.01.2024ರವರೆಗೆ ನಡೆದ ಸಿ.ಎ.ಎಸ್ ಆಯ್ಕೆ ಸಮಿತಿಯ ಸಂದರ್ಶನ ಪ್ರಕ್ರಿಯೆ.
8. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ಇಡಿ 147 ಡಿಸಿಇ 2022 (ಇ), ದಿನಾಂಕ:26.02.2024.

* * * *

**<u>ಪ್ರಸ್ತಾವನೆ:</u>**

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಖಾಸಗಿ ಅನುದಾನಿತ ಪದವಿ/ ಕಾನೂನು/ ಶಿಕ್ಷಣ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ಬೋಧಕರು/ ಗ್ರಂಥಪಾಲಕರಿಗೆ 2016ರ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಯನ್ನು ಉಲ್ಲೇಖ(1) & (2)ರ ಆದೇಶಗಳಲ್ಲಿ ಜಾರಿಗೊಳಸಲಾಗಿರುತ್ತದೆ. ಈ ಆದೇಶದಲ್ಲಿ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ಬೋಧಕರು / ಗ್ರಂಥಪಾಲಕರು ಶೈಕ್ಷಣಿಕ ಹಂತ 13ಎರಲ್ಲಿ ಯು.ಜಿ.ಸಿ ವೇತನ ಶ್ರೇಣಿ ರೂ.131400-217100ರಲ್ಲಿ 03 ವರ್ಷಗಳ ಅರ್ಹತಾದಾಯಕ ಸೇವೆ ಪೂರೈಸಿರುವುದನ್ನು ಪರಿಗಣಿಸಿ ಅರ್ಹತೆ ಹೊಂದಿರುವ ಸಹ ಪ್ರಾಧ್ಯಾಪಕರಿಗೆ ಸಿ.ಎ.ಎಸ್ ರಡಿಯಲ್ಲಿ ಶೈಕ್ಷಣಿಕ ಹಂತ 14ರ ವೇತನ ಶ್ರೇಣಿ ರೂ.144200-218200ರಲ್ಲಿ ಸ್ಥಾನೀಕರಣ ಹೊಂದಲು ಅವಕಾಶ ಕಲ್ಪಿಸಲಾಗಿರುತ್ತದೆ.

ಸರ್ಕಾರ ಮತ್ತು ಯು.ಜಿ.ಸಿ.ಯ ಉಲ್ಲೇಖ (1) & (2)ರ ಆದೇಶಗಳನ್ವಯ 2016ರ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿಯಲ್ಲಿ ಅನ್ವಯಿಸುವ ಷರತ್ತುಗಳಗೊಳಪಟ್ಟು ಸ್ಥಾನೀಕರಣ ಯೋಜನೆಯಡಿಯಲ್ಲಿ (Career Advancement Scheme) ಶೈಕ್ಷಣಿಕ ಹಂತಕ್ಕೆ ಸ್ಥಾನೀಕರಣ ಮಂಜೂರು ಮಾಡಲು ಉಲ್ಲೇಖ (3)ರ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಉಲ್ಲೇಖ (1) ರಿಂದ (3)ರವರೆಗಿನ ಯು.ಜಿ.ಸಿ ಮಾರ್ಗಸೂಚಿಗಳ ಹಾಗೂ ಸರ್ಕಾರದ ಆದೇಶದನುಸಾರ ಶೈಕ್ಷಣಿಕ ಹಂತ 13ಎ ರಿಂದ ಶೈಕ್ಷಣಿಕ ಹಂತ 14 ರಲ್ಲಿ ಸ್ಥಾನೀಕರಣ ಮಂಜೂರು ಮಾಡುವ ಸಂಬಂಧ ಪ್ರಾಂಶುಪಾಲರು ತಮ್ಮ ಹಂತದಲ್ಲಿ ಯು.ಜಿ.ಸಿ.ಯ ದಿನಾಂಕ:18.07.2018ರ ಕಂಡಿಕೆ 5.0 ರಿಂದ 6.4ರವರೆಗಿನ ಪ್ರಕಾರ ಆಯ್ಕೆ ಸಮಿತಿಯನ್ನು ರಚಿಸಿ ಸಹ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ಬೋಧಕರು/ ಗ್ರಂಥಪಾಲಕರಿಗೆ ಸಂಬಂಧಿಸಿದಂತೆ, ಯು.ಜಿ.ಸಿ.ಯ ದಿ:18.07.2018ರ ಅಧಿಸೂಚನೆಯಲ್ಲಿ ನೀಡಲಾಗಿರುವ 6.4 B(IV) UGC Regulations-2018 ರಂತೆ Appendix II Table 1 & Table 2 ಸಹ ಪ್ರಾಧ್ಯಾಪಕರು, Table 4 ಗ್ರಂಥಪಾಲಕರು, Table 5 ದೈಹಿಕ ಶಿಕ್ಷಣ ನಿರ್ದೇಶಕರ ಪ್ರಕಾರ ಕೂಲಂಕಷವಾಗಿ ಪರಿಶೀಲಿಸಿ, ಗ್ರೇಡಿಂಗ್/ ಸಂಶೋಧನೆ ಅಂಕಗಳನ್ನು ಆಧರಿಸಿ ಶೈಕ್ಷಣಿಕ ಹಂತ 14ಕ್ಕೆ ಅರ್ಹತೆ ಹೊಂದಿರುವವರ ಮಾಹಿತಿಗಳನ್ನು ನಿಗದಿತ ನಮೂನೆಗಳಲ್ಲಿ ಹಾಗೂ ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನೊಂದಿಗೆ ಅನುಮೋದನೆಗೆ ಸಲ್ಲಿಸಿ ಸಂಬಂಧಿಸಿದ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರ ಮುಖಾಂತರ ಅನುಮೋದನೆಗಾಗಿ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ.

ಉಲ್ಲೇಖ (6)ರ ಸರ್ಕಾರದ ಆದೇಶಕ್ಕೆ ಉಲ್ಲೇಖ (8)ರ ತಿದ್ದುಪಡಿ ಆದೇಶದಲ್ಲಿ ನೀಡಲಾಗಿರುವ ಸ್ಪಷ್ಟೀಕರಣದಂತೆ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಖಾಸಗಿ ಅನುದಾನಿತ ಪದವಿ/ ಶಿಕ್ಷಣ/ ಕಾನೂನು ಕಾಲೇಜುಗಳಲ್ಲಿ ಬೋಧಕರಿಗೆ ಸ್ಥಾನೀಕರಣ ಸೌಲಭ್ಯವನ್ನು ಸದರಿಯವರು Career Advancement Scheme (CAS) ರಡಿ ಸ್ಥಾನೀಕರಣಕ್ಕೆ ಅರ್ಹತೆ ಹೊಂದಿದ ದಿನಾಂಕದಿಂದ ಅರ್ಹತಾ ಅವಧಿಯನ್ನು ಪರಿಗಣಿಸುವಂತೆ ಹಾಗೂ ವೇತನ ನಿಗದಿಕರಣವನ್ನೊಳಗೊಂಡಂತೆ ಸ್ಥಾನೀಕರಣದ ಆರ್ಥಿಕ ಸೌಲಭ್ಯವನ್ನು ಸ್ಥಾನೀಕರಣ ಆದೇಶ ಹೊರಡಿಸಿದ ದಿನಾಂಕದಿಂದ ಭವಿಷ್ಯಾವರ್ತಿಯಾಗಿ (The monetary benefit on grant of CAS shall be prospective from the date of issue of the order) ಮಂಜೂರು ಮಾಡಲು ಆದೇಶಿಸಲಾಗಿರುತ್ತದೆ.

ಪ್ರಾಂಶುಪಾಲರ ಹಂತದ ಸಮಿತಿಯಿಂದ ಪರಿಶೀಲನೆಗೊಂಡು ಜಂಟಿ ನಿರ್ದೇಶಕರ ಶಿಫಾರಸ್ಸಿನೊಂದಿಗೆ ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ಈ ಕಛೇರಿಯ ಹಂತದಲ್ಲಿ ನಿಯಮಾನುಸಾರ ಪರಿಶೀಲಿಸಿ ಅರ್ಹತಾ ಪಟ್ಟಿಯನ್ನು ಕೇಂದ್ರ ಕಛೇರಿಯಲ್ಲಿ ರಚಿಸಲಾಗಿರುವ ವಿಷಯ ತಜ್ಞರು ಹಾಗೂ ವಿಶ್ವವಿದ್ಯಾಲಯದ ಪ್ರತಿನಿಧಿಗಳನ್ನೊಳಗೊಂಡ ಆಯ್ಕೆ ಸಮಿತಿಯ ಮುಂದೆ ಪೂರಕ ದಾಖಲೆಗಳೊಂದಿಗೆ ಹಾಜರುಪಡಿಸಲಾಗಿರುತ್ತದೆ. ಅದರನ್ವಯ ಸಂದರ್ಶನಕ್ಕೆ/ ಪರಿಶೀಲನೆಗೆ ಹಾಜರಾದ ಸಹಾಯಕ ಪ್ರಾಧ್ಯಾಪಕರ/ ದೈಹಿಕ ನಿರ್ದೇಶಕರ/ ಗ್ರಂಥಪಾಲಕರ ಗ್ರೇಡಿಂಗ್/ ಸಂಶೋಧನಾ ಅಂಕಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳನ್ನು, ಸಂಶೋಧನಾ ಲೇಖನಗಳು, ಶೈಕ್ಷಣಿಕ ಸಾಧನೆ, ಪ್ರಕಟಿಸಿರುವ ಪಠ್ಯ ಪುಸ್ತಕ/ ಲೇಖನ ಮತ್ತು ಇತರೆ ದಾಖಲೆಗಳನ್ನು ಪರಿಶೀಲಿಸಿ ಶೈಕ್ಷಣಿಕ ಹಂತ 14ಕ್ಕೆ ಸ್ಥಾನೀಕರಣ ಮಂಜೂರು ಮಾಡಲು ತೀರ್ಮಾನಿಸಲಾಗಿರುತ್ತದೆ. ಇಲಾಖಾ ಹಂತದ ಸಿ.ಎ.ಎಸ್ ಆಯ್ಕೆ ಸಮಿತಿಯ ತೀರ್ಮಾನದಂತೆ ಆಯ್ಕೆ ಹೊಂದಿದವರಿಗೆ ಯು.ಜಿ.ಸಿ ವೇತನ ಶ್ರೇಣಿ ರೂ.144200-218200ರಲ್ಲಿ ಶೈಕ್ಷಣಿಕ ಹಂತ **14**ಕ್ಕೆ ಸ್ಥಾನೀಕರಣ ಮಂಜೂರು ಮಾಡಲು ಈ ಆದೇಶ.

**ಆದೇಶ ಸಂಖ್ಯೆ:DCE/PP/PLA/73/2023-PP PVT, ದಿನಾಂಕ:26.02.2024.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ದಿನಾಂಕ:02.03.2021ರ ಸಂಖ್ಯೆ: ಇಡಿ 123 ಡಿಸಿಇ 2020ರ ಆದೇಶದ ಅನುಮೋದನೆ ಪ್ರಕಾರ ಪ್ರಾಂಶುಪಾಲರ ಹಂತದ ಸಮಿತಿಯ & ಜಂಟಿ ನಿರ್ದೇಶಕರ ಶಿಫಾರಸ್ಸಿನ ಮೇರೆಗೆ ಹಾಗೂ ಇಲಾಖಾ ಹಂತದ ಸ್ಥಾನೀಕರಣ ಆಯ್ಕೆ ಸಮಿತಿಯ ತೀರ್ಮಾನದಂತೆ, ಖಾಸಗಿ ಅನುದಾನಿತ ಪದವಿ/ ಕಾನೂನು/ ಶಿಕ್ಷಣ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರಿಗೆ ಸಂಬಂಧಿಸಿದಂತೆ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಹೆಸರಿಸಿರುವ ಬೋಧಕರಿಗೆ ಸಿ.ಎ.ಎಸ್‌ರಡಿಯಲ್ಲಿ ಸ್ಥಾನೀಕರಣವನ್ನು ಯು.ಜಿ.ಸಿ.

ವೇತನ ಶ್ರೇಣಿ ದಿನಾಂಕ:26.02.2024ರಿಂದ ರೂ.144200-218200ರಲ್ಲಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಉಲ್ಲೇಖ (4), (5) ಮತ್ತು (7)ರ ಸರ್ಕಾರದ ಆದೇಶದಂತೆ ಸಿ.ಎ.ಎಸ್‌ರಡಿ ಸ್ಥಾನೀಕರಣಕ್ಕೆ ಅರ್ಹತೆ ಹೊಂದಿದ ದಿನಾಂಕದಿಂದ ಅರ್ಹತಾವಧಿಯನ್ನು ಪರಿಗಣಿಸಿ, ವೇತನ ನಿಗದೀಕರಣ ಒಳಗೊಂಡಂತೆ ಸ್ಥಾನೀಕರಣದ ಆರ್ಥಿಕ ಸೌಲಭ್ಯಗಳನ್ನು ಸ್ಥಾನೀಕರಣ ಆದೇಶ ಹೊರಡಿಸಿದ ದಿನಾಂಕದಿಂದ ಭವಿಷ್ಯಾವರ್ತಿಯಾಗಿ ಅನ್ವಯವಾಗುವಂತೆ ಮಂಜೂರು ಮಾಡಿ ಆದೇಶಿಸಲಾಗಿದೆ.

**ಷರತ್ತುಗಳು:**

1. ಗ್ರೇಡಿಂಗ್ ಆಧಾರಿತ ಸ್ಥಾನೀಕರಣ ಮಂಜೂರಾತಿಯು ಉಲ್ಲೇಖ (1) & (2) ರ ಯುಜಿಸಿ/ ಸರ್ಕಾರದ ಆದೇಶಗಳಲ್ಲಿನ ನಿಯಮಗಳ ನಿಬಂಧನೆಗಳಿಗೊಳಪಟ್ಟಿರುತ್ತದೆ. 2018ರ ಯುಜಿಸಿ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿರುವ ಎಲ್ಲಾ ಅಂಶಗಳನ್ನು ಪೂರೈಸಿರುವ ಬಗ್ಗೆ ಪ್ರಾಂಶುಪಾಲರ ಹಂತದ ಸಮಿತಿ ಪರಿಶೀಲಿಸಿ ಶಿಫಾರಸ್ಸು ಮಾಡಿರುವ ಮೇರೆಗೆ ವೃತ್ತಿ ಪದೋನ್ನತಿ ಮಂಜೂರಾತಿಗೆ ಅನುಮೋದನೆ ನೀಡಲಾಗಿದ್ದು, ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಯಾವುದೇ ತಪ್ಪು ಮಾಹಿತಿಗಳನ್ನು ಒದಗಿಸಿರುವುದು ಕಂಡು ಬಂದಲ್ಲಿ ಸಂಬಂಧಿಸಿದ ಪ್ರಾಧ್ಯಾಪಕರ ಪದೋನ್ನತಿ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆಯನ್ನು ನೀಡದೆ ಹಿಂಪಡೆಯಲಾಗುವುದು. ಮತ್ತು ತಪ್ಪು ಮಾಹಿತಿ ಒದಗಿಸಿದ ಸಹ ಪ್ರಾಧ್ಯಾಪಕರ ಶಿಫಾರಸ್ಸು ಮಾಡಿದ ಪ್ರಾಂಶುಪಾಲರು ಹಾಗೂ ಜಂಟಿ ನಿರ್ದೇಶಕರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.
2. ಈ ಕಛೇರಿಯ ಉಲ್ಲೇಖ(3)ರ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಸಹಾಯಕ ಪ್ರಾಧ್ಯಾಪಕರ ಖಾಯಂ ನೇಮಕಾತಿ ದಿನಾಂಕ, ಯು.ಜಿ.ಸಿ. ವೇತನ ನಿಗದೀಕರಣದ ದಿನಾಂಕ, ವೇತನ ರಹಿತ ರಜೆ/ ಅನಧಿಕೃತ ಗೈರು ಹಾಜರಿ, ಶಿಸ್ತು ಕ್ರಮದ ಮಾಹಿತಿ, ಸಹ ಪ್ರಾಧ್ಯಾಪಕರ ಸಂಶೋಧನಾ ಲೇಖನಗಳು, ಶೈಕ್ಷಣಿಕ ಚಟುವಟಿಕೆಗಳು, ಪ್ರಕಟಿಸಿರುವ ಪಠ್ಯ-ಪುಸ್ತಕ/ ಲೇಖನ ಹಾಗೂ ಇತರೆ ದಾಖಲೆಗಳನ್ನು & ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಇಲಾಖಾ ಹಂತದ ಆಯ್ಕೆ ಸಮಿತಿಯು ಮತ್ತೊಮ್ಮೆ ಪರಿಶೀಲಿಸುವ ನಿಬಂಧನೆಗೊಳಪಟ್ಟಿರುತ್ತದೆ.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 483 ಯುಎನ್ಇ 2017 ದಿನಾಂಕ: 16.03.2019ರ ಆದೇಶದಲ್ಲಿ ಒದಗಿಸಿರುವ Annexure-III ನಮೂನೆಯಲ್ಲಿ ಮುಚ್ಚಳಿಕೆಯನ್ನು ಪ್ರಾಧ್ಯಾಪಕ ಹುದ್ದೆಗೆ ವರದಿಯಾಗುವಾಗ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸಲು ಸೂಚಿಸಿದೆ.
4. ಈ ವೃತ್ತಿ ಪದೋನ್ನತಿ ಮಂಜೂರಾತಿಯು ಯುಜಿಸಿ/ ಸರ್ಕಾರ/ ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ/ ಸುತ್ತೋಲೆ/ ಪತ್ರಗಳಲ್ಲಿ ನಿಗದಿಪಡಿಸುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
5. ವೃತ್ತಿ ಪದೋನ್ನತಿ ಯೋಜನೆ ಅಡಿಯಲ್ಲಿ ಮಂಜೂರಾಗಿರುವ ಉನ್ನತ ಶೈಕ್ಷಣಿಕ ಹಂತ 14ರ ಹುದ್ದೆಗೆ ಪದೋನ್ನತಿಗೊಂಡ ಪ್ರಾಧ್ಯಾಪಕರುಗಳ ಪದೋನ್ನತಿಯನ್ನು ಸೇವಾ ಜ್ಯೇಷ್ಠತೆಗೆ ಪರಿಗಣಿಸಲು ಅವಕಾಶವಿರುವುದಿಲ್ಲ.
6. ಈ ಆದೇಶದನ್ವಯ ಮಂಜೂರು ಮಾಡಲಾದ ವೃತ್ತಿ ಪದೋನ್ನತಿಯು ಸ್ಥಳೀಯ/ ಮಹಾಲೇಖಪಾಲರ ಲೆಕ್ಕ ಪರಿಶೋಧನೆಗೆ ಒಳಪಟ್ಟಿದ್ದು, ಯಾವುದೇ ಅಸಂಗತ ಮಾಹಿತಿ ಕಂಡು ಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.
7. ವೃತ್ತಿ ಪದೋನ್ನತಿ ಮಂಜೂರಾತಿ ಆದೇಶದ ಮೇರೆಗೆ ಪ್ರಾಂಶುಪಾಲರು ಎಲ್ಲಾ ದಾಖಲಾತಿಗಳನ್ನು ಮತ್ತೊಮ್ಮೆ ಪರಿಶೀಲಿಸಿದ ನಂತರ ಪ್ರಾಧ್ಯಾಪಕರ ವೇತನ ನಿಗದೀಕರಣದ ಬಗ್ಗೆ ಅಗತ್ಯ ಕ್ರಮಕೈಗೊಳ್ಳತಕ್ಕದ್ದು.
8. ಪಿಹೆಚ್.ಡಿ ಪದವಿಯ ನೈಜತೆಯ ಆಧಾರದ ಮೇಲೆ ಆದೇಶ ಹೊರಡಿಸಲಾಗಿದ್ದು, ಈ ಬಗ್ಗೆ ಮುಂದೆ ಅಸಂಗತ ಮಾಹಿತಿ ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಆದೇಶವನ್ನು ರದ್ದುಪಡಿಸುವ ಷರತ್ತಿಗೊಳಪಟ್ಟಿರುತ್ತದೆ.
9. ಉಲ್ಲೇಖ(4), (5) & (7)ರ ಸರ್ಕಾರದ ಆದೇಶದನ್ವಯ ಈ ಆದೇಶ ಹೊರಡಿಸಿದ ದಿನಾಂಕದಿಂದ ಭವಿಷ್ಯಾವರ್ತಿಯಾಗಿ ಪ್ರಾಧ್ಯಾಪಕರು ಶೈಕ್ಷಣಿಕ ಹಂತ 14ರ ಸ್ಥಾನೀಕರಣ ಆರ್ಥಿಕ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ.

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರು**

26.02.2024 MSK

**ಇವರಿಗೆ:**

ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ ಮಂಗಳೂರು, ಧಾರವಾಡ & ಕಲಬುರಗಿ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ – ಈ ಸ್ಥಾನೀಕರಣ ಆದೇಶದಂತೆ

ಸಂಬಂಧಪಟ್ಟ ಪ್ರಾಂಶುಪಾಲರಿಂದ ವೇತನ ನಿಗದೀಕರಣ ಪ್ರಸ್ತಾವನೆ ಪಡೆದು ತಮ್ಮ ಹಂತದಲ್ಲಿಯೇ ವೇತನ ನಿಗದಿಪಡಿಸಲು ತಿಳಿಸಲಾಗಿದೆ. ವೇತನ ನಿಗದೀಕರಣದಲ್ಲಿ ಉಂಟಾಗುವ ಯುಜಿಸಿ ವೇತನ ಬಾಕಿಯನ್ನು ಒಟ್ಟಾಗಿ ಲೆಕ್ಕ ಹಾಕಿ ವಿಶೇಷ ಆಯವ್ಯಯ ಮಂಜೂರಾತಿಗಾಗಿ ಈ ಕಛೇರಿಯ ಆಯವ್ಯಯ ವಿಭಾಗಕ್ಕೆ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ಹಾಗೂ ವಿಶೇಷ ಆಯವ್ಯಯ ಮಂಜೂರಾತಿ ಬಂದ ನಂತರವೇ ಬಾಕಿ ವೇತನವನ್ನು ಬಿಡುಗಡೆ ಮಾಡಲು ಸೂಚಿಸಲಾಗಿದೆ.

**ಪ್ರತಿಯನ್ನು:**

1) ಪ್ರಾಂಶುಪಾಲರು, ಭಾರತಿ ಕಾಲೇಜು, ಭಾರತಿನಗರ, ಮಂಡ್ಯ – 571 422- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ (01–ಸೇವಾವಹಿಯನ್ನು ಲಗತ್ತಿಸಿ ಕಳುಹಿಸಲಾಗಿದೆ).
2) ಪ್ರಾಂಶುಪಾಲರು, ಸಂತ ಜೋಸೆಫ್ ಕಾಲೇಜು, ಬೆಂಗಳೂರು – 560 001- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ (03–ಸೇವಾವಹಿಗಳನ್ನು ಲಗತ್ತಿಸಿ ಕಳುಹಿಸಲಾಗಿದೆ).
3) ಪ್ರಾಂಶುಪಾಲರು, ಎಸ್.ಡಿ.ಎಂ. ಕಾಲೇಜು, ಉಜಿರೆ –574 240– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ (01–ಸೇವಾವಹಿಯನ್ನು ಲಗತ್ತಿಸಿ ಕಳುಹಿಸಲಾಗಿದೆ).
4) ಪ್ರಾಂಶುಪಾಲರು, ಜೆ.ಎಸ್.ಎಸ್.ಬನಶಂಕರಿ ಕಾಲೇಜು, ಧಾರವಾಡ– 580 004 – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ (02–ಸೇವಾವಹಿಗಳನ್ನು ಲಗತ್ತಿಸಿ ಕಳುಹಿಸಲಾಗಿದೆ).
5) ಪ್ರಾಂಶುಪಾಲರು, ಬಿ.ಎಂ.ಎಸ್ ಮಹಿಳಾ ಕಾಲೇಜು, ಬೆಂಗಳೂರು– 560 004– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ (02–ಸೇವಾವಹಿಗಳನ್ನು ಲಗತ್ತಿಸಿ ಕಳುಹಿಸಲಾಗಿದೆ).
6) ಪ್ರಾಂಶುಪಾಲರು, ಎಸ್.ಜೆ.ಎಂ.ವಿ.ಬಿ.ಎ. ಜೆ.ಎಸ್.ಎಸ್ ಮಹಿಳಾ ಕಾಲೇಜು, ರಾಣೇಬೆನ್ನೂರು – 581115 – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ (01–ಸೇವಾವಹಿಯನ್ನು ಲಗತ್ತಿಸಿ ಕಳುಹಿಸಲಾಗಿದೆ).
7) ಪ್ರಾಂಶುಪಾಲರು, ವೀರೇಂದ್ರ ಪಾಟೀಲ್ ಪದವಿ ಕಾಲೇಜು, ಬೆಂಗಳೂರು – 560 080– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ (01–ಸೇವಾವಹಿಯನ್ನು ಲಗತ್ತಿಸಿ ಕಳುಹಿಸಲಾಗಿದೆ).
8) ಪ್ರಾಂಶುಪಾಲರು, ಶ್ರೀಮತಿ ವೀರಮ್ಮ ಗಂಗಸಿರಿ ಮಹಿಳಾ ಕಾಲೇಜು, ಕಲಬುರಗಿ–585 103 – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ (01–ಸೇವಾವಹಿಯನ್ನು ಲಗತ್ತಿಸಿ ಕಳುಹಿಸಲಾಗಿದೆ).
9) ಪ್ರಾಂಶುಪಾಲರು, ಎಂ.ಇ.ಎಸ್. ಕಾಲೇಜು, ಬೆಂಗಳೂರು– 560 003– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ (03–ಸೇವಾವಹಿಗಳನ್ನು ಲಗತ್ತಿಸಿ ಕಳುಹಿಸಲಾಗಿದೆ).
10) ಪ್ರಾಂಶುಪಾಲರು, ಆಲ್–ಅಮೀನ್ ಕಾಲೇಜು, ಬೆಂಗಳೂರು– 560 027– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ (01–ಸೇವಾವಹಿಯನ್ನು ಲಗತ್ತಿಸಿ ಕಳುಹಿಸಲಾಗಿದೆ).
11) ಪ್ರಾಂಶುಪಾಲರು, ಎ.ಪಿ.ಎಸ್ ವಿಜ್ಞಾನ ಕಾಲೇಜು, ಬೆಂಗಳೂರು– 560 019– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ (01–ಸೇವಾವಹಿಯನ್ನು ಲಗತ್ತಿಸಿ ಕಳುಹಿಸಲಾಗಿದೆ).
12) ಪ್ರಾಂಶುಪಾಲರು, ತುಂಗಾ ಮಹಾವಿದ್ಯಾಲಯ, ತೀರ್ಥಹಳ್ಳಿ– 577 432– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ (01–ಸೇವಾವಹಿಯನ್ನು ಲಗತ್ತಿಸಿ ಕಳುಹಿಸಲಾಗಿದೆ).
13) ಮಾಹಿತಿ ಅಧಿಕಾರಿಗಳು, ಶಾಖೆ, ಬೆಂಗಳೂರು- ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಅಗತ್ಯ ಕ್ರಮಕ್ಕಾಗಿ
14) ರಕ್ಷಾ ಕಡತ.
15) ಕಛೇರಿ ಪ್ರತಿ.

**ಆದೇಶ ಸಂಖ್ಯೆ:DCE/PP/PLA/73/2023-PP PVT, ದಿನಾಂಕ:26.02.2024ಕ್ಕೆ ಅನುಬಂಧ**

| ಕ್ರ. ಸಂ. | ಸಹ ಪ್ರಾಧ್ಯಾಪಕರ ಹೆಸರು | ವಿಷಯ | ಕಾಲೇಜಿನ ಹೆಸರು | ಶೈಕ್ಷಣಿಕ ಹಂತ 13ಎ ಮಂಜೂರಾತಿ ದಿನಾಂಕ | ಶೈಕ್ಷಣಿಕ ಹಂತ 14ಕ್ಕೆ ನಿಗದಿಪಡಿಸಲಾದ ದಿನಾಂಕ |
|---|---|---|---|---|---|
| 1 | 2 | 3 | 4 | 5 | 6 |
| 1 | ಡಾ.ನಾಗೇಂದ್ರ ಪಿ | ರಸಾಯನಶಾಸ್ತ್ರ | ಭಾರತಿ ಕಾಲೇಜು, ಭಾರತಿನಗರ | 01.03.2008 | 01.03.2011 |
| 2 | ಡಾ.ರೊನಾಲ್ಡ್ ಮಸ್ಕರೇನಸ್ | ರಸಾಯನಶಾಸ್ತ್ರ | ಸಂತ ಜೋಸೆಫ್ ಕಾಲೇಜು, ಬೆಂಗಳೂರು | 01.01.2006 | 01.01.2009 |
| 3 | ಡಾ.ಪಿ.ವಿಶ್ವನಾಥ | ರಸಾಯನಶಾಸ್ತ್ರ | ಎಸ್.ಡಿ.ಎಂ. ಕಾಲೇಜು, ಉಜಿರೆ | 16.07.2007 | 31.10.2016 |
| 4 | ಡಾ.ಬರಗಿ ಜಗದೀಶ ಗಿರಿಮಲ್ಲಪ್ಪ | ರಸಾಯನಶಾಸ್ತ್ರ | ಜೆ.ಎಸ್.ಎಸ್.ಬನಶಂಕರಿ ಕಾಲೇಜು, ಧಾರವಾಡ | 12.08.2012 | 12.08.2015 |
| 5 | ಡಾ.ವೆಂಕಟೇಶ ಮುತಾಲಿಕ್ | ರಸಾಯನಶಾಸ್ತ್ರ | ಜೆ.ಎಸ್.ಎಸ್.ಬನಶಂಕರಿ ಕಾಲೇಜು, ಧಾರವಾಡ | 05.11.2013 | 05.11.2016 |
| 6 | ಡಾ.ಡಿ.ಇ.ವಸುಂಧರ | ರಸಾಯನಶಾಸ್ತ್ರ | ಬಿ.ಎಂ.ಎಸ್ ಮಹಿಳಾ ಕಾಲೇಜು, ಬೆಂಗಳೂರು | 01.01.2006 | 04.09.2014 |
| 7 | ಡಾ.ಮೆಲ್ವಿನ್ ಕೊಲಸೊ | ರಸಾಯನಶಾಸ್ತ್ರ | ಸಂತ ಜೋಸೆಪ್ ಕಾಲೇಜು, ಬೆಂಗಳೂರು | 25.01.2007 | 31.07.2018 |
| 8 | ಡಾ.ಆರ್.ವಿ.ಹೆಗಡಾಳ | ವಾಣಿಜ್ಯಶಾಸ್ತ್ರ | ಎಸ್.ಜೆ.ಎಂ.ವಿ.ಬಿ.ಎ. ಜೆ.ಎಸ್.ಎಸ್ ಮಹಿಳಾ ಕಾಲೇಜು, ರಾಣೇಬೆನ್ನೂರು | 15.11.2007 | 29.08.2012 |
| 9 | ಡಾ.ಪಟೇಲ ನಾಗರಾಜಗೌಡ | ವಾಣಿಜ್ಯಶಾಸ್ತ್ರ | ವೀರೇಂದ್ರ ಪಾಟೀಲ್ ಪದವಿ ಕಾಲೇಜು, ಬೆಂಗಳೂರು | 22.12.2011 | 31.10.2017 |
| 10 | ಡಾ.ವೀಣಾ ಹೊನಗುಂಟಿಕರ್ | ಗಣಿತಶಾಸ್ತ್ರ | ಶ್ರೀಮತಿ ವೀರಮ್ಮ ಗಂಗಸಿರಿ ಮಹಿಳಾ ಕಾಲೇಜು, ಕಲಬುರಗಿ | 11.12.2006 | 11.12.2009 |
| 11 | ಡಾ.ಆರ್.ವಿ.ಶೀಲಾ | ಇಂಗ್ಲೀಷ್ | ಎಂ.ಇ.ಎಸ್. ಕಾಲೇಜು, ಬೆಂಗಳೂರು | 31.07.2014 | 31.08.2017 |
| 12 | ಡಾ.ಶಕೀರ ಖಾನುಂ ಎಂ. | ಹಿಂದಿ | ಆಲ್-ಅಮೀನ್ ಕಾಲೇಜು, ಬೆಂಗಳೂರು | 21.06.2012 | 22.06.2015 |
| 13 | ಡಾ.ಮಂಜುಶ್ರೀ ಮೆನನ್ | ಹಿಂದಿ | ಎಂ.ಇ.ಎಸ್. ಕಾಲೇಜು, ಬೆಂಗಳೂರು | 31.07.2016 | 31.07.2019 |
| 14 | ಡಾ. ಬಿ. ಜಯಶ್ರೀ | ಭೌತಶಾಸ್ತ್ರ | ಎ.ಪಿ.ಎಸ್ ವಿಜ್ಞಾನ ಕಾಲೇಜು, ಬೆಂಗಳೂರು | 15.11.2007 | 31.03.2018 |
| 15 | ಡಾ. ಉಷಾರಾಣಿ | ಭೌತಶಾಸ್ತ್ರ | ಎಂ.ಇ.ಎಸ್. ಕಾಲೇಜು, ಬೆಂಗಳೂರು | 15.11.2007 | 29.10.2021 |
| 16 | ಡಾ.ಎಲ್.ಶಕುಂತಲಮ್ಮ | ಪ್ರಾಣಿಶಾಸ್ತ್ರ | ಬಿ.ಎಂ.ಎಸ್ ಮಹಿಳಾ ಕಾಲೇಜು, ಬೆಂಗಳೂರು | 05.06.2011 | 06.06.2014 |
| 17 | ಡಾ. ಜಯರಾಮರೆಡ್ಡಿ | ಸಸ್ಯಶಾಸ್ತ್ರ | ಸೆಂಟ್ ಜೋಸೆಫ್ ಕಾಲೇಜು, ಬೆಂಗಳೂರು | 02.01.2006 | 31.01.2013 |
| 18 | ಡಾ.ಕೆ.ಆಂಜನಪ್ಪ | ಕನ್ನಡ | ತುಂಗಾ ಮಹಾವಿದ್ಯಾಲಯ, ತೀರ್ಥಹಳ್ಳಿ | 15.11.2007 | 31.10.2017 |

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರು**